# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಸ.ಅ.ವಾ.120
ವಾರ್ಡ್ ಸಮಿತಿ ಸಭೆ/ಸಂಖ್ಯೆ.06 /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ: 5/8/21

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

**ವಿಷಯ:-** ವಾರ್ಡ್ ಸಂಖ್ಯೆ. 120ರ, ಆಗಸ್ಟ್ 2021ರ ಮಾಹೆಯ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ.07.08.2021ರಂದು ಬೆಳಿಗ್ಗೆ 11.00 ಗಂಟೆಗೆ ನಿಗಧಿಪಡಿಸಿರುವ ಕುರಿತು.

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ.21.09.2020

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ. 120ರ ವಾರ್ಡ್ ಸಮಿತಿಯ ಸಭೆಯನ್ನು ಆಗಸ್ಟ್ 2021ರ ಮಾಹೆಯ ದಿನಾಂಕ. 07.08.2021ರಂದು ಬೆಳಿಗ್ಗೆ 11.00 ನಡೆಸಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ಸದರಿ ದಿನದಂದು ವಾರ್ಡ್‌ನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಹಾಗೂ ತೀರ್ಮಾನಿಸಲು, ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಿಗೂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯವರು, ಬೆಸ್ಕಾಂ ಅಧಿಕಾರಿಯವರು, ಸಹ ಕಂದಾಯ ಅಧಿಕಾರಿಯವರು ಹಾಗೂ ವಾರ್ಡಿನ ಪ್ರದೇಶದಲ್ಲಿನ ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳ ರವರಿಗೂ ಸಭೆಗೆ ಹಾಜರಾಗುವಂತೆ ಈ ಮೂಲಕ ಕೋರಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯದರ್ಶಿ

**ಸ್ಥಳ:-**

1. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಾಟನ್‌ಪೇಟೆ ಉಪವಿಭಾಗ ಕಛೇರಿ, ಮಾಗಡಿ ರಸ್ತೆ, 4ನೇ ಕ್ರಾಸ್, ಬಿಬಿಎಂಪಿ ಸಂಕೀರ್ಣ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ. /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 7/8/21

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ದಿನಾಂಕ. 07.08.2021ರಂದು ನಡೆದ ವಾರ್ಡ್ ಸಂಖ್ಯೆ. 120ರ ಸಮಿತಿ ಸಭೆಯ ನಡವಳಿಗಳು.

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ. 21.09.2020.

1. ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮುನಿಲಕ್ಷ್ಮಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.

1. ಮಳೆಗಾಲವು ಪ್ರಾರಂಭವಾಗಿರುವ ಹಿನ್ನಲೆಯಲ್ಲಿ ಪೈಪ್‌ಲೈನ್ ಹಾಗೂ ಮ್ಯಾನ್ ಹೋಲ್‌ಗಳು ತುಂಬಿ ಹರಿಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
2. ವಾರ್ಡಿನಲ್ಲಿ ವಿದ್ಯುತ್ ದೀಪಗಳನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಲಾಯಿತು.
3. ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ನಿರ್ಣಯ:-**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತಿರ್ಮಾನಿಸಿತ್ತು.

ಕಾರ್ಯದರ್ಶಿ
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :

1. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾಟನ್‌ಪೇಟೆ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.

Scanned with CamScanner